**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ- 471/2023**

**ಪ್ರಾಸಾಃ- 3 ಚಾಸಾಃ- 4**

| | | |
|---|---|---|
| ಸಾಕ್ಷಿಯ ಹೆಸರು | : | ಎಸ್.ಕೆ.ದೇವಿ ಪ್ರಸಾದ್ |
| ತಂದೆಯ ಹೆಸರು | : | ಎನ್.ಕೆ.ಸುದರ್ಶನ್ ಕುಮಾರ್ |
| ವಯಸ್ಸು | : | 47 ವರ್ಷ |
| ವೃತ್ತಿ | : | ನ್ಯಾಯಬೆಲೆ ಸೊಸೈಟಿ ಮಾಲೀಕರು |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.2.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 1 ಗೊತ್ತು ಆತ ಕೆ ಎಸ್ ಆರ್ ಟಿ ಸಿ ಯಲ್ಲಿ ಕೆಲಸ ಮಾಡುತ್ತಾನೆ. ಆತ ಬ್ಯಾಡಾರ ವಾಲ್ಮೀಕಿ ಜನಾಂಗಕ್ಕೆ ಸೇರಿದವನು. ನಾನು ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿತರು ಗೊತ್ತು. ನಾನು ಮತ್ತು ಚಾಸಾ 1 ರವರು ಆರೋಪಿತರು ಚಾಸಾ 1 ರವರಿಗೆ ರೂ. 2,00,000 ಸಾಲ ಕೊಟ್ಟಿದ್ದು ಅದನ್ನು ವಾಪಾಸ್ಸು ಕೊಡಲು ಉರವಕೊಂಡಕ್ಕೆ ರೂ. 1,80,000 ಗಳನ್ನು ಕೊಡಲು ಹೋಗಿದ್ದೆವು. ಅಲ್ಲಿ ಪೋಲೀಸ್ ಠಾಣಿಯಲ್ಲಿ ಸದರಿ ಹಣವನ್ನು ಕೊಟ್ಟು ರೂ. 20,000 ಸಾವಿರ ನಂತರ ಕೊಡುತ್ತೇವೆ ಎಂದು ಮಾತುಕತೆ ಆಯಿತು.

2. ದಿಃ 4-7-2022 ರಂದು ಚಾಸಾ 1 ರವರು ನಮ್ಮ ಮನೆ ಮುಂದೆ ಬಂದು ರೂ. 20,000 ಕೈಗಡ ಕೇಳಿದನು. ಉಳಿದ ಬಾಕಿ ಹಣವನ್ನು ಆರೋಪಿತರಿಗೆ ಕೊಡಬೇಕು ಎಂದು ಕೇಳಿರುತ್ತಾನೆ. ನಾನು ಚಾಸಾ 1 ರವರ ಜೊತೆ ಬಳ್ಳಾರಿ ಕೆ ಎಸ್ ಆರ್ ಟಿ ಸಿ ಡಿಪೋ ಹತ್ತಿರ ಇರುವ ಡಿವಿಜನ್ ಆಫೀಸ್ ಗೆ ಹೋಗಿರುತ್ತೇವೆ. ಅಲ್ಲಿ 1 ನೇ ಆರೋಪಿ ಇದ್ದನು. ಆತನಿಗೆ ರೂ. 20,000 ಕೊಡಲು ಹೋಗಿದ್ದೆವು. ಆಗ 1 ನೇ ಆರೋಪಿಯು ರೂ. 20,000 ಕೊಡುವುದು ಬೇಡ ನಾನು ನ್ಯಾಯಾಲ ದಲ್ಲಿ ಕೇಸು ಹಾಕಿರುತ್ತೇನೆ ಅಲ್ಲೇ ನೋಡೋಣ ಬ್ಯಾಡಾರ ಸೂಳೆ ಮಗನೇ ಎಂದು ಚಾಸಾ 1 ರವರಿಗೆ ಬೈದನು.

3. ದಿಃ 14-11-2022 ರಂದು ಚಾಸಾ 1 ರವರು ವಿಷ ಕುಡಿದು ವಿಮ್ಸ್ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾನೆ. ನಾನು ಆತನನ್ನು ಕೇಳಲಾಗಿ ವೆಂಕಟೇಶ್ ಇವನು ಆತನನ್ನು ಕೆ ಎಸ್ ಆರ್ ಟಿ ಸಿ ಡಿಪೋ ಹತ್ತಿರ ಹೊಡೆದು ಹೋಗಿರುತ್ತಾನೆ ಆ ಕಾರಣ ವಿಷ ಕುಡಿದಿರುತ್ತೇನೆ ಎಂದು ಜಾತಿಎತ್ತಿ ಬೈದಿರುತ್ತಾನೆ ಎಂದು ಹೇಳಿರುತ್ತಾನೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ಆರ್ ಎಸ್ ವಕೀಲರಿಂದಃ**

4. ನಾನು ದೇವಿನಗರದ ನಿವಾಸಿ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ. ಡಿಪೋ ಮತ್ತು ದೇವಿ ನಗರಕ್ಕೆ ಬಹಳ ದೂರ ಇದೆ ಎಂದರೆ ಸರಿ. ನಾನು ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನಗೆ ಡಿಪೋದಲ್ಲಿ ಹೋಗಲು ಪಾಸ್ ಇಲ್ಲ ಎಂದರೆ ಸರಿ. ದಿಃ 14-11-2022 ರ ಘಟನೆಗೆ ನಾನು ಪ್ರತ್ಯಕ್ಷದರ್ಶಿ ಅಲ್ಲ ಎಂದರೆ ಸರಿ. ಸದರಿ ರೂ. 20,000 ರೂಗಳನ್ನು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಕೊಡಲು ಹೋಗಿರುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. 2018 ಕ್ಕೆ ರೂ. 20,000 ಗಳನ್ನು ಕೇಳಿದ ಬಗ್ಗೆ ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರ ಮೇಲೆ ಚೆಕ್ ಬೌನ್ಸ್ ಪ್ರಕರಣದ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಕೇಸು ದಾಖಲಾದ ಮೇಲೆ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಚೆಕ್ ಬೌನ್ಸ್ ಪ್ರಕರಣಗಳಲ್ಲಿ ಚಾಸಾ 1 ಮತ್ತು ಅತನ ಹೆಂಡತಿ ಹಣ ಕಟ್ಟಿರುತ್ತಾರೆ ಎಂದರೆ ಸರಿ. ಆರೋಪಿತರು ಕೆ ಎಸ್ ಆರ್ ಟಿ ಸಿ ಯ ನೌಕರರು ಅಲ್ಲ ಎಂದರೆ ಸರಿ. ದಿಃ 14-11-2022 ರಂದು ಚಾಸಾ 1 ರವರಿಗೆ ಅವಮಾನವಾಗಿ ವಿಷ ಕುಡಿದಿರುತ್ತಾರೆ ನಾನು ದೂರು ಕೊಟ್ಟಿರುವುದಿಲ್ಲ ಎಂದರೆ ಸರಿ.

5. ಚಾಸಾ 1 ನಾನು ಹುಟ್ಟಿನಿಂದ ಸ್ನೇಹಿತರು. ಚಾಸಾ 1 ರವರ ಹಣವನ್ನು ಲಪಟಾಯಿಸುವಕ್ಕೋಸ್ಕರ ಸುಳ್ಳು ದೂರು ದಾಖಲಿಸಿ ಆರೋಪಿತರಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮನೆಗೂ ಶಾಸ್ತ್ರಿ ನಗರಕ್ಕೂ ಬಹಳ ದೂರ ಇರುತ್ತದೆ ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ವಸತಿ ಗೃಹದ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ ಸರಿ.

6. ದಿ: 4-7-2022 ರಂದು ಈ ದೂರನ್ನು ಚಾಸಾ 1 ರವರು ದಾಖಲಿಸಿರುತ್ತಾರೆ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಸ್ನೇಹಿತರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.